No. of Printed Pages : **2**

# GN-051

101684

III Semester B.B.A. Examination, December - 2019

(F+R) (CBCS) (2015-16 and Onwards)

## ಕನ್ನಡ ಭಾಷಾ ಪತ್ರಿಕೆ - III

### ಸುವರ್ಣ ಸಂಪದ

Time : 3 Hours | Max. Marks : 70

**I.** (ಅ) ಒಂದು ಪದ್ಯದ ಭಾವಾರ್ಥವನ್ನು ಬರೆಯಿರಿ. **1x6=6**

(1) ಕಾಂಚನವೆಂಬ ನಾಯ ನೆಚ್ಚಿ ನಿಮ್ಮ ನಾನು ಮರೆವೆನಯ್ಯಾ
ಕಾಂಚನಕ್ಕೆ ವೇಳೆಯಲ್ಲದೆ ಲಿಂಗಕ್ಕೆ ವೇಳೆಯಲ್ಲ
ಹಡಕೆಗೆ ಮೆಚ್ಚಿದ ಸೊಣಗ
ಅಮೃತದ ರುಚಿಯ ಬಲ್ಲುದೆ ಕೂಡಲಸಂಗಮದೇವಾ ?

(2) ಅಲಸದೆ ಸಮಸ್ತ ಭೂಮಂಡಲವನಾಳ್ವ ರವಿ
ಕುಲಜರಪ್ಪಿ ಕ್ಷಾಕು ವಂಶದರಸುಗಳೊಳತಿ
ಬಲರೆನಿಸಿ ಮನವಚನ ಕಾಯದೊಳಗೊಮ್ಮೆಯುಂ ಹುಸಿ ಹೊದ್ದದಂತೆ ನಡೆವ
ಕಲಿಗಳಾರಯ್ಯ ಹೇಳವರ ಪಾರಂಪರೆಗೆ
ಸಲೆಸಂದ ರಾಜಗುರು ನೀನಱಿಯದವರಿಲ್ಲ
ವೆಲೆ ಮುನಿಪ ಹೇಳೆಂದು ಹಲವು ಕಣ್ಣಾದವಂ ನುಡಿದನು ವಸಿಷ್ಠ ಮುನಿಗೆ

(ಆ) **ಎರಡಕ್ಕೆ** ಟಿಪ್ಪಣಿ ಬರೆಯಿರಿ. **2x2=4**

(1) ಪಂಪ

(2) ವಚನ

(3) ಶಿವಬ್ರಾಹ್ಮಣ

(4) ಭೀಷ್ಮ

(ಇ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿ. **1x10=10**

(1) ಕಣ್ಣಪ್ಪನ ಮುಗ್ಧ ಭಕ್ತಿಯನ್ನು ವಿವರಿಸಿ.

(2) ಸಮಾಜ ಹಣಕ್ಕೆ ನೀಡುವ ಪ್ರಾಮುಖ್ಯತೆಯನ್ನು ವಚನಕಾರರು ಹೇಗೆ ವಿವರಿಸಿದ್ದಾರೆ ?

**II.** (ಅ) **ಎರಡು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. **2x5=10**

(1) ಮಾಹಿತಿ ತಂತ್ರಜ್ಞಾನ ಮತ್ತು ಇಂಗ್ಲೀಷಿನ ಸಂಬಂಧ.

(2) ಅಸಂಘಟಿತ ಕ್ಷೇತ್ರದ ಮಹಿಳಾ ಉದ್ಯೋಗಿಗಳ ಸಮಸ್ಯೆಗಳು.

(3) ರಿಲಯನ್ಸ್ ಕಂಪನಿ ಎಸಗಿದ ಮಹಾ ಮೋಸ.

(ಆ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿ. **1x10=10**

(1) ಜಾಗತೀಕರಣದ ಸಂದರ್ಭವು ಮಹಿಳಾ ಉದ್ಯಮದ ಮೇಲೆ ಬೀರುವ ಪರಿಣಾಮವನ್ನು ವಿವರಿಸಿ.

(2) ಗಾಂಧೀಜಿ ಚಿಂತನೆಗಳಿಗೆ ವಿರುದ್ಧವಾಗಿ ಸಾಗುತ್ತಿರುವ ಇಂದಿನ ಬಂಡವಾಳಶಾಹಿ ವ್ಯವಸ್ಥೆಯನ್ನು ಕುರಿತು ಬರೆಯಿರಿ.

**III.** (ಅ) **ಒಂದು** ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ. **1x5=5**

(1) ಲಿಖಿತ ಜಾನಪದದ ಸ್ವರೂಪ

(2) ವಿಜ್ಞಾನಿಗಳ ಸಂಶೋಧನೆ ಮತ್ತು ಕರ್ತವ್ಯದ ಬದ್ಧತೆ

(ಆ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿ. **1x10=10**

(1) ಕನ್ನಡ ಬ್ಲಾಗುಗಳಿಂದ ಕನ್ನಡ ಭಾಷೆ ಬೆಳೆಯುತ್ತಿದೆಯೇ ಚರ್ಚಿಸಿ.

(2) ವಿಚಾರವಂತ ಸಮಾಜ ಕಟ್ಟುವಲ್ಲಿ ವಿಜ್ಞಾನಿಗಳ ಪಾತ್ರ ದೊಡ್ಡದು – ಡಾ.ಎಚ್. ನರಸಿಂಹಯ್ಯನವರ ಅಭಿಪ್ರಾಯದೊಂದಿಗೆ ಚರ್ಚಿಸಿ.

**IV.** (ಅ) **ಒಂದು** ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ. **1x5=5**

(1) ಆನ್‌ಲೈನ್ ಮಾರುಕಟ್ಟೆಯಿಂದಾಗುವ ಲಾಭಗಳು.

(2) ನ್ಯೂಸ್‌ಪೇಪರ್ – ಟಿ.ವಿ. ಚಾನೆಲ್‌ಗಳ ಮೂಲ ವ್ಯತ್ಯಾಸ.

(ಆ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿ. **1x10=10**

(1) ಆನ್‌ಲೈನ್ ಮಾರುಕಟ್ಟೆಯ ಕಡೆ ಯುವ ಜನಾಂಗ ಆಕರ್ಷಿತವಾಗುತ್ತಿದೆಯೇ ? ವಿಶ್ಲೇಷಿಸಿ.

(2) 'ದುಡಿಮೆಯೇ ದುಡ್ಡಿನ ತಾಯಿ' ಎಂಬ ಮಾತು ಶರತ್‌ಬಾಬುವಿಗೆ ಹೇಗೆ ಅನ್ವಯಿಸುತ್ತದೆ ? ವಿವರಿಸಿ.

- o O o -